# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಚಿಕ್ಕನಾಯಕನಹಳ್ಳಿ

**ಉಪಸ್ಥಿತರು :- ಶ್ರೀ ಸತೀಶ್. ಎಸ್.ಟಿ., ಬಿ.ಕಾಂ., ಎಲ್.ಎಲ್.ಬಿ.,**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಚಿಕ್ಕನಾಯಕನಹಳ್ಳಿ**

**ದಿನಾಂಕ:- 19 ನೇ ಜೂನ್ ಮಾಹೆ 2026.**

**ಸಿ.ಸಿ. ನಂ. 2349/2022**

**ಪಿರ್ಯಾದಿದಾರರು:** ಹಂದನಕೆರೆ ಪೊಲೀಸ್ ಠಾಣೆ, ಹಂದನಕೆರೆ

**(ಸಹಾಯಕ ಸರ್ಕಾರಿ ಅಭಿಯೋಜಕರು)**

**ವಿರುದ್ಧ**

**ಆರೋಪಿ:** 1. ಬಸವರಾಜು ಬಿನ್ ಲೇಟ್ ಶಂಕರಪ್ಪ
ವಯಸ್ಸು 45 ವರ್ಷ,
ಮತ್ತಿಘಟ್ಟ ಗ್ರಾಮ, ಸಿ.ಎನ್ ಹಳ್ಳಿ ತಾಲ್ಲೂಕು,
ತುಮಕೂರು.

(ಆರೋಪಿ ಪರವಾಗಿ ಶ್ರೀ ಕೆ.ಸಿ.ವಿ ವಕೀಲರು)

**<u>ತೀರ್ಪು</u>**

ಈ ದೋಷಾರೋಪಣೆ ಪಟ್ಟಿಯನ್ನು ಚಿಕ್ಕನಾಯಕನಹಳ್ಳಿ ವೃತ್ತದ ವೃತ್ತ ನಿರೀಕ್ಷಕರು ಆರೋಪಿ ವಿರುದ್ಧ ಭಾ.ದಂ.ಸಂ. ಕಲಂ.279, 304(ಎ)ರ ಅಡಿಯಲ್ಲಿ ಸಲ್ಲಿಸಿರುತ್ತಾರೆ.

**<u>ಅಭಿಯೋಜನೆಯ ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇರುತ್ತದೆ.</u>**

2. ದಿನಾಂಕಃ16.09.2022 ರಂದು ಮಧ್ಯಾಹ್ನ 4.15 ಕ್ಕೆ ಮೃತ ಗೋಪಿ ಎಚ್ ಮೈಸೂರಿನಿಂದ ಹುಳಿಯಾರಿಗೆ ತಮ್ಮ ದ್ವಿಚಕ್ರ ವಾಹನವಾದ KA-51-EK-6122 ರಲ್ಲಿ ಗೋಪಾಲಪುರದ ಈಶ್ವರ ದೇವಸ್ಥಾನ ಸಮೀಪ ರಸ್ತೆಯ ಎಡಬದಿಯಲ್ಲಿ ಬರುತ್ತಿರುವಾಗ ಆರೋಪಿಯುು ತನ್ನ ವಾಹನ TATA ACE ಅದರ ಸಂಖ್ಯೆ KA-44-A-1202 ರ ಚಾಲಕನಾಗಿ ಹುಳಿಯಾರು ಕಡೆಯಿಂದ ಚಿಕ್ಕನಾಯಕನಹಳ್ಳಿ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಗೋಪಿ ರವರು ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಅಪಘಾತ ಪಡಿಸಿ ಅದರ ಪರಿಣಾಮ ಗೋಪಿ ರವರು ಬೈಕ ಸಮೇತ ರಸ್ತೆಗೆ ಬಿದ್ದು ಇದರಿಂದ ಅವರ ತಲೆಗೆ, ಎದೆಗೆ ತೀವ್ರ ಸ್ವರೂಪದ ಗಾಯವಾಗಿ ಸ್ಥಳದಲ್ಲೆ ಮತ ಪಟ್ಟಿದ್ದರಿಂದ ಈ ದೂರು ಸಲ್ಲಿಸಲಾಗಿದೆ.

3. ಅಭಿಯೋಜನೆಯು ಮುಂದುವರೆದು ದಿನಾಂಕಃ 16.09.2022 ರಂದು ಪಿರ್ಯಾದುದಾರರಿಂದ ಲಿಖಿತ ದೂರು ಸಲ್ಲಿಸಿದನ್ವಯ ಹಂದನಕೆರೆ ಪೋಲಿಸ್

ಠಾಣೆಯ ಪಿಎಸ್ಐ ರವರು ಪ್ರಕರಣವನ್ನು ನೋಂದಾಯಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳು ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡು ಹುಳಿಯಾರು ಆಸ್ಪತ್ರೆಗೆ ಹೋಗಿ ಗೋಪಿ ಶವವನ್ನು ಪಂಚರ ಸಮಕ್ಷಮ ಶವ ಪಂಚನಾಮೆ ಮಾಡಿ ಘಟನಾ ಸ್ಥಳಕ್ಕೆ ಹೋಗಿ ಪಂಚರ ಸಮಕ್ಷಮ ಘಟನಾ ಸ್ಥಳದ ಪಂಚನಾಮೆ ಮಾಡಿ ಅಪಘಾತವಾದ ವಾಹನವನ್ನು ಠಾಣೆಗೆ ತಂದು ಜಪ್ತಿ ಮಾಡಿಕೊಂಡು ಪಂಚರ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತಾರೆ. ನಂತರ ಸಾಕ್ಷಿಗಳ ಹೇಳಿಕೆ ಪಡೆದು ಆರೋಪಿಯನ್ನು ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತಾರೆ. ನಂತರ ಅಪಘಾತವಾದ ವಾಹನದ ತಪಾಸಣೆಯನ್ನು ಎಆರ್ ಟಿ ಓ ರವರಿಂದ ತಪಾಸಣೆ ಮಾಡಿಸಿ ವರದಿ ಪಡೆದು, ಗೌರಮ್ಮರವರ ಪಿಎಂ ವರದಿಯನ್ನು ಪಡೆದು, ತನಿಖೆ ಮುಗಿದ ನಂತರ ಆರೋಪಿ ವಿರುದ್ಧ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ದೋಷರೋಪಣಾಪಟ್ಟಿ ಸಲ್ಲಿಸಿದ ನಂತರ ಈ ನ್ಯಾಯಾಲಯವು ಆರೋಪಿಗಳಿಗೆ ಸಮನ್ಸ್‌ನ್ನು ಜಾರಿ ಮಾಡಲಾಯಿತು. ಆರೋಪಿಗಳು ತಮ್ಮ ವಕೀಲರ ಮುಖಾಂತರ ಹಾಜರಾದ ಮೇರೆಗೆ ಉಭಯತಪಕ್ಷಗಾರರ ವಾದ ವಿವಾದವನ್ನು ಕೇಳಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ನಂತರ ಆರೋಪಿಗಳಿಗೆ ದೋಷರೋಪಣೆಪಟ್ಟಿ ನಕಲನ್ನು ಒದಗಿಸಿ ದೋಷರೋಪಣೆ ರಚಿಸಿ ಓದಿ

ಹೇಳಲಾಯಿತು, ಆರೋಪಿಗಳು ತಾವು ಯಾವುದೇ ತಪ್ಪನ್ನು ಮಾಡಿರುವುದಿಲ್ಲ. ಪ್ರಕರಣವನ್ನು ವಿಚಾರಣೆಗೆ ಒಳಪಡಿಸಿಬೇಕು ಎಂದು ಕೇಳಿಕೊಂಡಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ಇಡಲಾಯಿತು.

5. ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತು ಪಡಿಸಲು ಚಾಸಾ-1 ರಿಂದ 4 ರವರನ್ನು ಪ್ರಾಸಾ-1 ರಿಂದ 4 ಎಂದು ವಿಚಾರಣೆ ಮಾಡಿ 9 ದಾಖಲೆಗಳನ್ನು ನಿಪಿ-1 ರಿಂದ 9 ಎಂದು ಗುರುತಿಸಲಾಯಿತು. ಪ್ರಾಸಾ-1 ರಿಂದ 4 ರವರ ವಿಚಾರಣೆಯಾದ ನಂತರ ಮಾನ್ಯ ಎ.ಪಿ.ಪಿ. ರವರು ಇತರೆ ಸಾಕ್ಷಿಗಳಿಗೆ ಸಮನ್ಸ್ ಹೊರಡಿಸಲು ಕೋರಿರುತ್ತಾರೆ. ಈ ಪ್ರಕರಣದಲ್ಲಿ ಪ್ರಾಸಾ-1 ರಿಂದ 4 ಅಪಘಾತದಲ್ಲಿ ಪ್ರಮುಖ ಮತ್ತು ಪ್ರತ್ಯಕ್ಷ ಸಾಕ್ಷಿಯಾಗಿರುತ್ತಾರೆ, ಆದರೆ ಅವರು ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಹೀಗಾಗಿ ಇತರೆ ಸಾಮಾನ್ಯ ಸಾಕ್ಷಿಗಳನ್ನು ವಿಚಾರಣೆ ಮಾಡುವುದರಿಂದ ಯಾವುದೇ ಉದ್ದೇಶ ಹಿಡೇರುವುದಿಲ್ಲ. ಆದ್ದರಿಂದ ಮಾನ್ಯ ಎ.ಪಿ.ಪಿ ರವರ ಕೋರಿಕೆಯನ್ನು ತೀರಸ್ಕರಿಸಲಾಯಿತು. ಇತರೇ ಸಾಕ್ಷಿಗಳ ವಿಚಾರಣೆಯನ್ನು ಕೈ ಬಿಡಲಾಯಿತು.

6. ನಾನು ಉಭಯತರ ಪಕ್ಷಗಾರರ ವಾದ-ವಿವಾದವನ್ನು ಕೇಳಿರುತ್ತೇನೆ.

7. ಕಡತವನ್ನು ಪರಿಶೀಲಿಸಿರುತ್ತೇನೆ.

8. ಈ ಪ್ರಕರಣವನ್ನು ನಿರ್ಣಯಿಸಲು ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

## ಅಂಶಗಳು

1. ದಿನಾಂಕಃ16.09.2022 ರಂದು ಮಧ್ಯಾಹ್ನ 4.15 ಕ್ಕೆ ಮೃತ ಗೋಪಿ ಎಚ್ ಮೈಸೂರಿನಿಂದ ಹುಳಿಯಾರಿಗೆ ತಮ್ಮ ದ್ವಿಚಕ್ರ ವಾಹನವಾದ KA-51-EK-6122 ರಲ್ಲಿ ಗೋಪಾಲಪುರದ ಈಶ್ವರ ದೇವಸ್ಥಾನ ಸಮೀಪ ರಸ್ತೆಯ ಎಡಬದಿಯಲ್ಲಿ ಬರುತ್ತಿರುವಾಗ ಆರೋಪಿಯು ತನ್ನ ವಾಹನ TATA ACE ಅದರ ಸಂಖ್ಯೆ KA-44-A-1202 ರ ಚಾಲಕನಾಗಿ ಹುಳಿಯಾರು ಕಡೆಯಿಂದ ಚಿಕ್ಕನಾಯಕನಹಳ್ಳಿ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಗೋಪಿ ರವರು ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಅಪಘಾತ ಪಡಿಸಿ ಅದರ ಪರಿಣಾಮ ಗೋಪಿ ರವರು ಬೈಕ ಸಮೇತ ರಸ್ತೆಗೆ ಬಿದ್ದು ಇದರಿಂದ ಅವರ ತಲೆಗೆ, ಎದೆಗೆ ತೀವ್ರ ಸ್ವರೂಪದ ಗಾಯವಾಗಿ ಸ್ಥಳದಲ್ಲೆ ಮತ ಪಟ್ಟಿದ್ದರಿಂದ ಭಾ.ದಂ.ಸಂ. ಕಲಂ. 279 ಮತ್ತು 304(ಎ)ರ ಅಡಿಯಲ್ಲಿ ಅಪರಾಧ ಎಸಗಿರುತ್ತಾರೆಂದು ನಿಸ್ಸಂದೇಹವಾಗಿ ಸಾಬೀತುಪಡಿಸುವರೇ?

2. ಯಾವ ಆದೇಶ ?

9. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ.

**ಅಂಶ 1 : ನಕಾರಾತ್ಮಕವಾಗಿ**

**ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ**

## ಕಾರಣಗಳಿಗಾಗಿ

10. **ಅಂಶ-1:** ಅಭಿಯೋಜನೆಯು ತನ್ನ ಪ್ರಕರಣವನ್ನು ರುಜುವಾತು ಪಡಿಸಲು ಪಿರ್ಯಾದುದಾರರಾದ ಮೃತ ಗೋಪಿ ರವರ ಹೆಂಡತಿ ಮಂಜುಳಾರವರನ್ನು ಫ್ರಾಸಾ-1 ಆಗಿ ವಿಚಾರಣೆ ಮಾಡಿ ಅವರು ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಇವರು ತಮ್ಮ ವಿಚಾರಣೆಯಲ್ಲಿ ಮೃತ ಗೋಪಿ ನನ್ನ ಗಂಡ ಆಗಬೇಕು. ನಾನು ಆರೋಪಿಯನ್ನು ನೋಡಿರುವುದಿಲ್ಲ. ಹೀಗೆ ಸುಮಾರು 2 ವರ್ಷದ ಹಿಂದೆ ಮದ್ಯಾಹ್ನ ಸುಮಾರು 4.50 ಕ್ಕೆ ನನ್ನ ಗಂಡ ಮೈಸೂರಿನಿಂದ ಹುಳಿಯಾರಕ್ಕೆ ಬೈಕಿನಲ್ಲಿ ಬರುತ್ತಿರುವಾಗ ಒಂದು ಟಾಟಾ ಎಸಿ ವಾಹನವು ಗೋಪಲಾಪುರದ ಈಶ್ವರ ದೇವಸ್ಥಾನ ಸಮೀಪ ಅಪಘಾತಪಡಿಸಿ ಇದರಿಂದ ನನ್ನ ಗಂಡನ ತಲೆಗೆ ಕೈಕಾಲುಗಳಿಗೆ ಮತ್ತು ಇತರ ಭಾಗಕ್ಕೆ ತೀವ್ರ ಸ್ವರೂಪದ ಗಾಯವಾಗಿ ಮೃತಪಟ್ಟರು. ಆಗ ನಾನು ಮನೆಯಲ್ಲಿ ಇದ್ದು ಅಪಘಾತ ಹೇಗೆ ಆಗಿರುತ್ತದೆ ನಾನು ನೋಡಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆ ದೂರು ಕೊಟ್ಟಿರುತ್ತೇನೆ. ಅದರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

11.ಮಾನ್ಯ ಎಪಿಪಿರವರು ಈ ಸಾಕ್ಷಿಗಳನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮ್ಮ ಪಾಟೀ ಸವಾಲಿನಲ್ಲಿ ನನ್ನ ಮದುವೆ ಗೋಪಿಯವರೊಂದಿಗೆ ಹೀಗೆ 10 ವರ್ಷಗಳ ಹಿಂದೆ ಆಗಿರುತ್ತದೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಗಂಡ ಸ್ಟೌವ್ ಮಿಕ್ಚರ್ ರಿಪೇರಿ ಕೆಲಸ ಮಾಡುತ್ತಿದ್ದರು. ದಿನಾಂಕಃ 16.09.2022 ರಂದು ನನ್ನ ಗಂಡ

ಮೈಸೂರಿನಿಂದ ಹುಳಿಯಾರಕ್ಕೆ ತಮ್ಮ ಬೈಕ್ ಅದರ ಸಂಖೆಃKA-51-EK-6122 ರಲ್ಲಿ ಬರುತ್ತಿರುವಾಗ ಮಧ್ಯಾಹ್ನ ಸುಮಾರು 4.50 ಕ್ಕೆ ಗೋಪಾಲಪುರ ಗ್ರಾಮದ ಈಶ್ವರ ದೇವಾಲಯ ಸಮೀಪ ನನ್ನ ಗಂಡ ಎಡಬದಿಯಲ್ಲಿ ಚಲಿಸುತ್ತಿರುವಾಗ ಹುಳಿಯಾರು ಕಡೆಯಿಂದ ಒಂದು ಟಾಟಾ ಎಸಿ ವಾಹನ ಅದರ ಸಂಖ್ಯೆಃ KA-44-A1202 ಚಾಲಕನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ನನ್ನ ಗಂಡನ ಬೈಕಿಗೆ ಡಿಕ್ಕಿ ಪಡೆಸಿದರು, ಆಗ ನನ್ನ ಗಂಡ ಬೈಕ್ ಸಮೇತ ಬಿದ್ದು ತಲೆಗೆ, ಎದೆಗೆ ತೀವ್ರ ಸ್ವರೂಪದ ಗಾಯವಾಗಿ ಮೃತಪಟ್ಟರು,  ಬೈಕ್ ನ ಹಿಂಭಾಗದಲ್ಲಿ ಬರುತ್ತಿದ್ದ ಚಾಸಾ-2 ಕುಮಾರ್ ಎಂಬುವವರು ನನಗೆ ವಿಷಯ ತಿಳಿಸಿದರು, ನಾನು ತಕ್ಷಣ ಹೋಗಿ ನೋಡಿದಾಗ ನನ್ನ ಗಂಡನ ತಲೆಗೆ ತೀವ್ರ ಸ್ವರೂಪದ ರಕ್ತ ಗಾಯವಾಗಿ ಮೃತಪಟ್ಟಿದ್ದರು, ನಂತರ ನಾನು ಸ್ಥಳೀಯರ ಸಹಾಯದಿಂದ ಹುಳಿಯಾರ ಆಸ್ಪತ್ರೆಗೆ ನನ್ನ ಗಂಡನ ಶವವನ್ನು ಸಾಗಿಸಿದೆವು, ನಂತರ ನಿಪಿ.1 ರಂತೆ ಠಾಣೆಗೆ ಹೋಗಿ ದೂರು ಸಲ್ಲಿಸಿದೆನು ಇವರ ಈ ಸಾಕ್ಷಿಯಿಂದ ಅಭಿಯೋಜನೆಯು ನಿಪಿ-1 ದೂರಿನ ಅಂಶವನ್ನು ರುಜುವಾತು ಪಡಿಸಲು ವಿಫಲವಾಗಿದೆ ಎಂದು ಹೇಳಬಹುದಾಗಿದೆ.

12. ಈ ಪ್ರಕರಣದ ಸಾಕ್ಷಿ ಫ್ರಾಸಾ-2 ವಸಂತ್ ಕುಮಾರ್ ಸಾಕ್ಷಿಯನ್ನು ಪರಿಗಣಿಸಿದಾಗ ಇವರು ಸಹ ಅಪಘಾತವನ್ನು ಕಣ್ಣಾರೆ ನೋಡಿದವರಾಗಿದ್ದು ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ

ನುಡಿಯುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮೃತ ಗೋಪಿ ನನ್ನ ಮಾವ ಆಗಬೇಕು. ನಾನು ಆರೋಪಿಯನ್ನು ನೋಡಿರುವುದಿಲ್ಲ. ಹೀಗ್ಗೆ ಸುಮಾರು 2 ವರ್ಷದ ಹಿಂದೆ ಮದ್ಯಾಹ್ನ ಸುಮಾರು 4.50 ಕ್ಕೆ ನನ್ನ ಮಾವ ಗೋಪಿ ಮೈಸೂರಿನಿಂದ ಹುಳಿಯಾರಕ್ಕೆ ಬೈಕಿನಲ್ಲಿ ಬರುತ್ತಿರುವಾಗ ಒಂದು ಟಾಟಾ ಎಸಿ ವಾಹನವು ಗೋಪಲಾಪುರದ ಈಶ್ವರ ದೇವಸ್ಥಾನ ಸಮೀಪ ಅಪಘಾತಪಡಿಸಿ ಇದರಿಂದ ನನ್ನ ಮಾವನ ತಲೆಗೆ ಕೈಕಾಲುಗಳಿಗೆ ಮತ್ತು ಇತರ ಭಾಗಕ್ಕೆ ತೀವ್ರ ಸ್ವರೂಪದ ಗಾಯವಾಗಿ ಮೃತಪಟ್ಟರು. ಆಗ ನಾನು ಹುಳಿಯಾರದಲ್ಲಿ ಇದ್ದೆ. ಅಪಘಾತ ಹೇಗೆ ಆಗಿರುತ್ತದೆ ನಾನು ನೋಡಿರುವುದಿಲ್ಲ. ಅಪಘಾತ ಆದ ನಂತರ ನಾನು ಸ್ಥಳಕ್ಕೆ ಬಂದಿರುತ್ತೇನೆ. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ. ನಾನು ಠಾಣೆಗೆ ಈ ಅಪಘಾತ ಸಂಬಂಧ ಹೋದಾಗ ಪೋಲಿಸರು ಪಂಚನಾಮೆಗೆ ನನ್ನ ಸಹಿ ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಪಂಚನಾಮೆ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

13.ಮಾನ್ಯ ಎಪಿಪಿರವರು ಈ ಸಾಕ್ಷಿಗಳನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮ್ಮ ಪಾಟೀ ಸವಾಲಿನಲ್ಲಿ ನನ್ನ ಅಕ್ಕ ಮಂಜುಳಾ ರವರ ಮದುವೆ ಗೋಪಿಯವರೊಂದಿಗೆ ಹೀಗ್ಗೆ 10 ವರ್ಷಗಳ ಹಿಂದೆ ಆಗಿರುತ್ತದೆ. ಅವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಮಾವ ಗೋಪಿ ಸ್ಟೌವ್ ಮಿಕ್ಚರ್ ರಿಪೇರಿ ಕೆಲಸ ಮಾಡುತ್ತಿದ್ದರು.

ದಿನಾಂಕಃ 16.09.2022 ರಂದು ನನ್ನ ಮಾವ ಮೈಸೂರಿನಿಂದ ಹುಳಿಯಾರಕ್ಕೆ ತಮ್ಮ ಬೈಕ್ ಅದರ ಸಂಖೆಃKA-51-EK-6122 ರಲ್ಲಿ ಬರುತ್ತಿರುವಾಗ ಮಧ್ಯಾಹ್ನ ಸುಮಾರು 4.50 ಕ್ಕೆ ಗೋಪಾಲಪುರ ಗ್ರಾಮದ ಈಶ್ವರ ದೇವಾಲಯ ಸಮೀಪ ನನ್ನ ಮಾವ ಎಡಬದಿಯಲ್ಲಿ ಚಲಿಸುತ್ತಿರುವಾಗ ಹುಳಿಯಾರ ಕಡೆಯಿಂದ ಒಂದು ಟಾಟಾ ಎಸಿ ವಾಹನ ಅದರ ಸಂಖ್ಯೆಃ KA-44-A1202 ಚಾಲಕನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿ ನನ್ನ ಮಾವ ಬೈಕಿಗೆ ಡಿಕ್ಕಿ ಪಡೆಸಿದರು, ಆಗ ನನ್ನ ಮಾವ ಬೈಕ್ ಸಮೇತ ಬಿದ್ದು ತಲೆಗೆ, ಎದೆಗೆ ತೀವ್ರ ಸ್ವರೂಪದ ಗಾಯವಾಗಿ ಮೃತಪಟ್ಟರು, ನಾನು ಸ್ಥಳದಲ್ಲೆ ಇದ್ದು ಅಪಘಾತವನ್ನ ಕಣ್ಣಾರೆ ನೋಡಿರುತ್ತೇನೆಂದರೆ, ನಾನು ತಕ್ಷಣ ಹೋಗಿ ನೋಡಿದಾಗ ನನ್ನ ಮಾವನ ತಲೆಗೆ ತೀವ್ರ ಸ್ವರೂಪದ ರಕ್ತ ಗಾಯವಾಗಿ ಮೃತಪಟ್ಟಿದ್ದರು, ನಂತರ ನಾನು ಸ್ಥಳೀಯರ ಸಹಾಯದಿಂದ ಹುಳಿಯಾರ ಆಸ್ಪತ್ರೆಗೆ ನನ್ನ ಮಾವನ ಶವವನ್ನು ಸಾಗಿಸಿದೆವು, ಅಪಘಾತ ಆದನಂತರ ದಿನಾಂಕ ಃ 18.09.2022 ರಂದು ಹಂದನಕೆರೆ ಪೋಲಿಸರು ನನ್ನನ್ನು ಹಾಗೂ ಚಾಸಾ-3 ಮತ್ತು 4 ರವರನ್ನು ಅಪಘಾತ ಸ್ಥಳಕ್ಕೆ ಬರಮಾಡಿಕೊಂಡು ನಾನು ತೋರಿಸಿಕೊಟ್ಟ ಹಾಗೆ ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿದ್ದರು, ನಂತರ ಅದರ ಅಂಶವನ್ನು ಓದಿ ಹೇಳಿ ನನ್ನ ಮತ್ತು ಪಂಚರ ಸಹಿಯನ್ನು ಸ್ಥಳದಲ್ಲೇ ಪಡೆದರು, ಪಂಚನಾಮೆಯನ್ನು ಆ ದಿವಸ ಬೆಳಿಗ್ಗೆ 10-30 ರಿಂದ 11-30 ರವರೆಗೆ ಜರುಗಿಸಿದರು ಎಂದು ಸೂಚಿಸಿದರು

ಅಭಿಯೋಜನೆಗೆ ಸಹಾಯವಾಗುವಂತಹ ಯಾವುದೇ ಅಂಶಗಳನ್ನು ಹೇಳಿರುವುದಿಲ್ಲ. ಇವರ ಈ ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿ ಅಭಿಯೋಜನೆಯ ಪ್ರಕರಣವನ್ನು ಸಹಕರಿಸಿರುವುದಿಲ್ಲ ಎಂದು ಹೇಳಬಹುದಾಗಿದೆ.

14. ಈ ಪ್ರಕರಣದ ಸಾಕ್ಷಿ ಫ್ರಾಸಾ-3 ಮೂರ್ತಿ ಹಾಗೂ ಫ್ರಾಸಾ-4 ಕಾಂತರಾಜು ರವರ ಸಾಕ್ಷಿಯನ್ನು ಪರಿಗಣಿಸಿದಾಗ ಇವರು ನಿಪಿ-4 ಪಂಚನಾಮೆಯ ಪಂಚರಾಗಿದ್ದು ತಮ್ಮ ವಿಚಾರಣೆಲ್ಲಿ ಅಭಿಯೋಜನೆಗೆ ಸಂಪೂರ್ಣವಾಗಿದ್ದು ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಾವು ಠಾಣೆಗೆ ಈ ಅಪಘಾತ ಸಂಬಂಧ ಹೋದಾಗ ಪೋಲಿಸರು ಪಂಚನಾಮೆಗೆ ನಮ್ಮ ಸಹಿ ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಪಂಚನಾಮೆ ವಿಚಾರ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ.

15. ಮಾನ್ಯ ಎಪಿಪಿರವರು ಈ ಸಾಕ್ಷಿಗಳನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ತಮ್ಮ ಪಾಟೀ ಸವಾಲಿನಲ್ಲಿ ಅಪಘಾತ ಆದನಂತರ ದಿನಾಂಕ:18.09.2022 ರಂದು ಹಂದನಕೆರೆ ಪೋಲಿಸರು ನಮ್ಮನುನ ಅಪಘಾತ ಸ್ಥಳಕ್ಕೆ ಬರಮಾಡಿಕೊಂಡು ನಾನು ತೋರಿಸಿಕೊಟ್ಟ ಹಾಗೆ ಅಪಘಾತ ಸ್ಥಳದ ಪಂಚನಾಮೆಯನ್ನು ಮಾಡಿದ್ದರು, ನಂತರ ಅದರ ಅಂಶವನ್ನು ಓದಿ ಹೇಳಿ ನನ್ನ ಮತ್ತು ಪಂಚರ ಸಹಿಯನ್ನು ಸ್ಥಳದಲ್ಲೇ ಪಡೆದರು, ಪಂಚನಾಮೆಯನ್ನು ಆದಿವಸ ಬೆಳಿಗ್ಗೆ 10-30 ರಿಂದ 11-30 ರವರೆಗೆ ಜರುಗಿಸಿದರು

ಎಂದು ಸೂಚಿಸಿದರು ಅಭಿಯೋಜನೆಗೆ ಸಹಾಯವಾಗುವಂತಹ ಯಾವುದೇ ಅಂಶವನ್ನು ಹೇಳಿರುವುದಿಲ್ಲ. ಇವರ ಈ ಸಾಕ್ಷಿಯಿಂದ ಅಭಿಯೋಜನೆಯು ನಿಪಿ-4 ಪಂಚನಾಮೆಯ ಅಂಶವನ್ನು ರುಜುವಾತು ಪಡಿಸಲು ವಿಫಲವಾಗಿದೆ ಎಂದು ಹೇಳಬಹುದಾಗಿದೆ.

16. ಫ್ರಾಸಾ-1 ರಿಂದ 4 ರವರ ವಿಚಾರಣೆಯಾದ ನಂತರ ಮಾನ್ಯ ಎ.ಪಿ.ಪಿ. ರವರು ಇತರೆ ಸಾಕ್ಷಿಗಳಿಗೆ ಸಮನ್ಸ್ ಹೊರಡಿಸಲು ಕೋರಿರುತ್ತಾರೆ. ಈ ಪ್ರಕರಣದಲ್ಲಿ ಫ್ರಾಸಾ-1 ರಿಂದ 4 ಅಪಘಾತದಲ್ಲಿ ಪ್ರಮುಖ ಮತ್ತು ಪ್ರತ್ಯಕ್ಷ ಸಾಕ್ಷಿಯಾಗಿರುತ್ತಾರೆ, ಆದರೆ ಅವರು ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಹೀಗಾಗಿ ಇತರೆ ಸಾಮಾನ್ಯ ಸಾಕ್ಷಿಗಳನ್ನು ವಿಚಾರಣೆ ಮಾಡುವುದರಿಂದ ಯಾವುದೇ ಉದ್ದೇಶ ಹಿಡೇರುವುದಿಲ್ಲ. ಆದ್ದರಿಂದ ಮಾನ್ಯ ಎ.ಪಿ.ಪಿ ರವರ ಕೋರಿಕೆಯನ್ನು ತೀರಸ್ಕರಿಸಲಾಯಿತು. ಇತರೇ ಸಾಕ್ಷಿಗಳ ವಿಚಾರಣೆಯನ್ನು ಕೈ ಬಿಡಲಾಯಿತು, ಫ್ರಾಸಾ-1 ರಿಂದ 4 ತಮ್ಮ ವಿಚಾರಣೆಯಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದರಿಂದ, ನಾನು **ಅಂಶ-1 ನ್ನು ನಕರಾತ್ಮಕವಾಗಿ ಉತ್ತರಿಸಿರುತ್ತೇನೆ.**

17. **ಅಂಶ ನಂ.2:-** ಈ ಮೇಲಿನ ಕಾರಣ ಮತ್ತು ವಿವರಣೆಗಳಿಗಾಗಿ ಈ ಕೆಳಗಿನಂತೆ ಮಾಡಿದೆ:

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರ ಅಡಿಯಲ್ಲಿ ವರ್ತಿಸುತ್ತಾ ಆರೋಪಿ ಭಾ.ದಂ.ಸಂ. ಕಲಂ.279 ಮತ್ತು 304(ಎ)ರ ಅಡಿಯಲ್ಲಿ ಹೊರಿಸಲಾದ ಆರೋಪಕ್ಕೆ ಆರೋಪಿ ತಪ್ಪಿತಸ್ಥನಲ್ಲನೆಂದು ಬಿಡುಗಡೆ ಮಾಡಲಾಗಿದೆ.

ಆರೋಪಿಯ ಮತ್ತು ಅವರ ಜಾಮೀನುದಾರರ ಮುಚ್ಚಳಿಕೆಯನ್ನು ರದ್ದು ಮಾಡಲಾಗಿದೆ.

(ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ನೇರವಾಗಿ ಉಕ್ತಲೇಖನ ನೀಡಿದ್ದು, ಸೂಕ್ತ ತಿದ್ದುಪಡಿಯ ನಂತರ ದಿನಾಂಕಃ 19 ನೇ ಜೂನ್ ಮಾಹೆ 2026 ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು)

Sd/-
**(ಸತೀಶ್.ಎಸ್.ಟಿ.)**
ಹಿರಿಯ ಸಿವಿಲ್ ಜಡ್ಜ್ **&** ಜೆ.ಎಂ.ಎಫ್.ಸಿ.,
ಚಿಕ್ಕನಾಯಕನಹಳ್ಳಿ.

## ಅನುಬಂಧ

1. **ಅಭಿಯೋಜನೆ ಪರ ವಿಚಾರಣೆಗೆ ಒಳ ಪಟ್ಟ ಸಾಕ್ಷಿಗಳ ಪಟ್ಟಿ**:-

| | | |
|---|---|---|
| ಪ್ರಾಸಾ-1 | : | ಮಂಜುಳಾ |
| ಪ್ರಾಸಾ-2 | : | ವಸಂತಕುಮಾರ್ |
| ಪ್ರಾಸಾ-3 | : | ಮೂರ್ತಿ |
| ಪ್ರಾಸಾ-4 | : | ಕಾಂತರಾಜು |

2. **ಅಭಿಯೋಜನೆ ಪರ ನಿಶಾನೆಗಳಾಗಿ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ**:-

| | | |
|---|---|---|
| ನಿ.ಪಿ.1 | : | ದೂರು |
| ನಿ.ಪಿ.1(ಎ) | : | ಸಾಕ್ಷಿಯ ಸಹಿ |
| ನಿ.ಪಿ.2-3 | : | ಎರಡು ಫೋಟೊಗಳು |
| ನಿ.ಪಿ.4 | : | ಸ್ಥಳ ಪಂಚನಾಮೆ |
| ನಿ.ಪಿ.4(ಎ) | : | ಸಾಕ್ಷಿಯ ಸಹಿ |
| ನಿ.ಪಿ.4 (ಬಿ) | : | ಸಾಕ್ಷಿಯ ಸಹಿ |
| ನಿ.ಪಿ.4(ಸಿ) | : | ಸಾಕ್ಷಿಯ ಸಹಿ |
| ನಿ.ಪಿ.5 | : | ಚಾಸಾ-2 ರವರ ಹೇಳಿಕೆ |
| ನಿ.ಪಿ.6-7 | : | 2 IMV Report |
| ನಿ.ಪಿ.8 | : | Inquest Report |
| ನಿ.ಪಿ.9 | : | PM Report |

3. **ಅಭಿಯೋಜನೆ ಪರ ಗುರುತಿಸಲ್ಪಟ್ಟ ಮುದ್ದೆ ಮಾಲುಗಳ ಪಟ್ಟಿ**:-

ಯಾವುದೂ ಇಲ್ಲ

4. **ಆರೋಪಿ ಪರ ವಿಚಾರಣೆಗೆ ಒಳ ಪಟ್ಟ ಸಾಕ್ಷಿಗಳ ಪಟ್ಟಿ**:-

ಯಾವುದೂ ಇಲ್ಲ

5. **ಆರೋಪಿ ಪರ ನಿಶಾನೆಗಳಾಗಿ ಗುರುತಿಸಲ್ಪಟ್ಟ ದಾಖಲೆಗಳ ಪಟ್ಟಿ**:-

ಯಾವುದೂ ಇಲ್ಲ.

Sd/-

ಹಿರಿಯ ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.,
ಚಿಕ್ಕನಾಯಕನಹಳ್ಳಿ.